ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕಗೋಪುರ 3ನೇ ಮಹಡಿ,
ಡಾ॥ ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560 001
E-Mail Id:icps.kar@gmail.com
Phone No: 080-22867381/2/3

ಸಂಖ್ಯೆ:ಐಸಿಪಿಎಸ್/ತರಬೇತಿ/ಸಂವಾದ/7/2021–22 ದಿನಾಂಕ: –5–2021

## ಸುತ್ತೋಲೆ

ವಿಷಯ:ಕೇಂದ್ರ ಸರ್ಕಾರದ SAMVADA(Support, Advocacy & Mental Health Interventions for Children in Vulnerable Circumstances and Distress)ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳ ಆಪ್ತ ಸಮಾಲೋಚನೆಗೆ ಸಹಕಾರ ಪಡೆಯುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:No-CW-II-30/37/2016-CW-II Date:4/5/2021

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್–19 ಬಿಕ್ಕಟ್ಟಿನಲ್ಲಿ ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಬೆಂಬಲದೊಂದಿಗೆ ನಿಮಾನ್ಸ್ SAMVADA(Support, Advocacy & Mental health Interventions for children in Vulnerable circumstances and Distress)ಕಾರ್ಯಕ್ರಮದ ಅಡಿಯಲ್ಲಿ

1. ಮಕ್ಕಳಿಗಾಗಿ ಅಸ್ತಿತ್ವದಲ್ಲಿರುವ ರಾಜ್ಯ ಸರ್ಕಾರಗಳ ಮಕ್ಕಳ ಸಹಾಯವಾಣಿಗಳಿಗೆ ಮಾರ್ಗದರ್ಶನ ಕಾರ್ಯಕ್ರಮಗಳು
2. ಮಕ್ಕಳ ರಕ್ಷಣೆಗಾಗಿ ಕೆಲಸ ಮಾಡುವವರಿಗೆ ಸಹಾ ಆನ್‌ಲೈನ್ ಮೂಲಕ ಟೆಲಿ–ಮಾರ್ಗದರ್ಶನ ಕಾರ್ಯಕ್ರಮಗಳನ್ನು ಆಯೋಜಿಸಿರುತ್ತಾರೆ.

ಮಕ್ಕಳ ಸಮಸ್ಯೆಗಳ ಸ್ಪಂದನೆಗೆ ಸಂಬಂಧಿಸಿದ ಸಲಹೆ ಸೂಚನೆಗಳ ಕುರಿತಂತೆ ಮಾರ್ಗದರ್ಶನಕ್ಕಾಗಿ ಈ ಕೆಳಗೆ ವಿವರಿಸಿರುವಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

- http://samvad.nimhanschildprotect.in/covid-econsultation ಲಿಂಕ್‌ನಲ್ಲಿ ಟೆಲಿ–ಆಪ್ತಸಮಾಲೋಚನೆ ಅಗತ್ಯವಿರುವ ಮಗು/ಆಪ್ತಸಮಾಲೋಚರು/ಸಿಬ್ಬಂದಿಯ ಪ್ರಾಥಾಮಿಕ ಮಾಹಿತಿಯನ್ನು ಭರ್ತಿ ಮಾಡುವುದು
- ಮಾಹಿತಿ ಸ್ವೀಕರಿಸಿದ ನಂತರ ಸಂವಾದ ತಂಡ ತಮ್ಮ ಆಪ್ತಸಮಾಲೋಚಕರು/ಸಿಬ್ಬಂದಿಯನ್ನು ಟೆಲಿ–ಆಪ್ತಸಮಾಲೋಚನೆ ಅಗತ್ಯವಿರುವವರಿಗೆ ಸಹಾಯ ಮಾಡಲು ನಿಯೋಜಿಸಿ, ಜೂಮ್(zoom)ಲಿಂಕ್‌ನೊಂದಿಗೆ ದಿನಾಂಕ ಮತ್ತು ಸಮಯ ನಿಗದಿಪಡಿಸಿ ಅಪ್ಲಿಕೆಂಟ್‌ಗೆ ಕಳುಹಿಸುತ್ತಾರೆ.
- ಆಪ್ತಸಮಾಲೋಚರು/ಸಿಬ್ಬಂದಿಯು ಸಂವಾದ ನೀಡಿದ ನಿಗದಿತ ದಿನಾಂಕ ಮತ್ತು ಸಮಯದಲ್ಲಿ ಜೂಮ್(zoom)ಲಿಂಕ್‌ನಲ್ಲಿ ಹಾಜರಾಗುವುದು.
- ಸಂವಾದ ಸಿಬ್ಬಂದಿಗಳಿಂದ ಜೂಮ್(zoom)ಲಿಂಕ್ ಮೂಲಕ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಲಹೆ ಮತ್ತು ಸೂಚನೆಗಳನ್ನು ಪಡೆಯಬಹುದಾಗಿದೆ.

1. ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ(ಪುನರ್ವಸತಿ, ಮಕ್ಕಳನ್ನು ದತ್ತು ಪ್ರಕ್ರಿಯೆಗೆ ಒಳಪಡಿಸಲು ಇರುವ ಸಾಧ್ಯಾಸಾಧ್ಯತೆಗಳು ಸೇರಿದಂತೆ)
2. ಮನೋ ಸಾಮಾಜಿಕ ಮತ್ತು ಮಾನಸಿಕ ಆರೋಗ್ಯ ವಿಷಯಗಳು(ಮಕ್ಕಳ ಭಾವನಾತ್ಮಕ ಮತ್ತು ವರ್ತನಾ ಸಮಸ್ಯೆಗಳ ಕುರಿತಂತೆ, ಮಗುವಿನ ಪೋಷಕರ ಅನಾರೋಗ್ಯ ಮತ್ತು ಸಾವು ಕುರಿತಂತೆ ಮಕ್ಕಳಿಗೆ ಮಾಹಿತಿ ಯಾವ ರೀತಿಯಲ್ಲಿ ತಿಳಿಸುವುದು, ಮಕ್ಕಳು ಸಂಬಂಧೀಕರನ್ನು ಕಳೆದುಕೊಂಡ ಹಾಗೂ ತೀವ್ರ ನೋವಿನಿಂದ ಹೊರತರುವುದು ಇತ್ಯಾದಿ ಮಾರ್ಗೋಪಾಯಗಳ ಬಗ್ಗೆ)
3. ಅವಶ್ಯವಿದ್ದಲ್ಲಿ ಲಭ್ಯವಿರುವ ಸ್ಥಳೀಯ ಮನೋವೈದ್ಯಕೀಯ ಸೌಲಭ್ಯಗಳು/ಸೇವೆಗಳಿಗೆ ಸಂಪರ್ಕ ಕಲ್ಪಿಸುವುದು.

ಮೇಲೆ ವಿವರಿಸಿರುವಂತೆ ಅವಶ್ಯಕತೆಗೆ ಅನುಸಾರವಾಗಿ ಕಾರ್ಯಕ್ರಮದ ಪ್ರಯೋಜನ ಪಡೆಯಲು ಸೂಚಿಸಲಾಗಿದೆ. ಹಾಗೂ ಸಂವಾದ ಕಾರ್ಯಕ್ರಮದಿಂದ ಪಡೆದ ನೆರವಿನ ಬಗ್ಗೆ ಆಗಿಂದಾಗ್ಗೆ ಕೇಂದ್ರ ಕಛೇರಿಗೆ ಮಾಹಿತಿ/ವರದಿ ಸಲ್ಲಿಸಲು ಸಹಾ ಸೂಚಿಸಿದೆ.

25.05.2021

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು.

ಪ್ರತಿಯನ್ನು:

- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು
- ಎಲ್ಲಾ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳು ಸಹ ಈ ಕಾರ್ಯಕ್ರಮದ ಪ್ರಯೋಜನ ಪಡೆಯುವಂತೆ ಕ್ರಮವಹಿಸುವುದು
- "ಸಂವಾದ" ತಂಡದ ಮುಖ್ಯಸ್ಥರು, ನಿಮ್ಹಾನ್ಸ್, ಬೆಂಗಳೂರು ಇವರಿಗೆ.